# ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.132/2016

ಚಾಸಾ-1 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 13.11.2018

| | | |
|---|---|---|
| ಹೆಸರು | ಃ | ಮಹಾದೇವ ಬಳಗಾರ |
| ತಂದೆಯ ಹೆಸರು | ಃ | ಧರ್ಮಣ್ಣ |
| ವಯಸ್ಸು | ಃ | 28-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಕರಜಗಿ |

ಮುಖ್ಯ ವಿಚಾರಣೆ ಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿದೆ. ನನ್ನ ಹಾಗೂ ಆರೋಪಿತರ ಜಮೀನು ಅಕ್ಕ-ಪಕ್ಕದಲ್ಲಿವೆ. ಕರಜಗಿ ಸೀಮಾಂತರದಲ್ಲಿಯ ಜಮೀನು ಸರ್ವೆ ನಂಃ234 ವಿಸ್ತೀರ್ಣ 4-ಎಕರೆ 5-ಗುಂಟೆ ನನಗೆ ಸಂಬಂಧಿಸಿದ್ದು ಇದ್ದು, ಅದರಂತೆ ಸರ್ವೆ ನಂಃ235 1 ನೇ ಆರೋಪಿತನ ಜಮೀನು ಇದೆ. 3 ವರ್ಷಗಳ ಹಿಂದೆ ಸಾಯಂಕಾಲ 5.00 ಗಂಟೆಗೆ ರೈತಾಪಿ ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿ ನನ್ನ ಜಮೀನಿನ ಬಾಂದಾರಿಯನ್ನು ಅತಿಕ್ರಮಿಸದಂತೆ ವಿನಂತಿಸಿದಾಗ ನನ್ನ ಹಾಗೂ ಆತನ ನಡುವೆ ಬಾಯಿ ಮಾತಿನ ತಕರಾರು ಆಗಿರುತ್ತದೆ. ಆನಂತರ ಮನೆಗೆ ಬಂದಾಗ ಸಾಯಂಕಾಲ 7.00 ಗಂಟೆಗೆ ಚಾಸಾ-6 ರವರ ಮನೆಯ ಮುಂದೆ ಆರೋಪಿತರೆಲ್ಲರೂ ಬಂದು 1 ನೇ ಆರೋಪಿ ಕೊಡಲಿಯಿಂದ ತಲೆಗೆ ಹಲ್ಲೆಮಾಡಿದಾಗ ಮೈಕೈಗೆ ಒದೆಯುವುದು ಕೈಯಿಂದ ಹೊಡೆಯುದು ಮಾಡಿರುತ್ತಾನೆ. 2 ನೇ ಆರೋಪಿ ತೆಕ್ಕೆ ಕುಸ್ತಿಬಿದ್ದು ಕೈಯಿಂದ ಹೊಡೆ-ಬಡೆ ಮಾಡಿರುತ್ತಾನೆ. 3 ನೇ ಆರೋಪಿ ಕಲ್ಲಿನಿಂದ ಬೆನ್ನಿನ ಮೇಲೆ ಹಲ್ಲೆ ಮಾಡಿರುತ್ತಾನೆ. ಘಟನೆಯನ್ನು ಚಾಸಾ-5 ರಿಂದ 7 ರವರು ಬಿಡಿಸಿರುತ್ತಾರೆ.

ಘಟನೆಯಾದ ನಂತರ ಠಾಣೆಗೆ ಹೋಗಿ ಪಿರ್ಯಾದಿ ನೀಡಿದ ನಂತರ ಚಿಕಿತ್ಸೆಗೆಂದು ಅಫಜಲಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅದೇ ದಿನ ರಾತ್ರಿ ಹೆಚ್ಚಿನ

ಚಿಕಿತ್ಸೆಗಾಗಿ ಕಲಬುರಗಿಯ ಬಸವೇಶ್ವರ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನನ್ನ ಚಿಕಿತ್ಸಾ ವೆಚ್ಚಕ್ಕೆಂದು ಅಂದಾಜು 25-30 ಸಾವಿರ ಖರ್ಚಾಗಿರುತ್ತದೆ.

ಘಟನಾ ಸ್ಥಳವನ್ನು ಪೊಲೀಸರು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಸಾಕ್ಷಿ ಹಲ್ಲೆಗೆ ಬಳಸಿದ ಕೊಡಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಎಮ್.ಓ-1 ಎಂದು ಗುರುತಿಸಲಾಯಿತು. ಸಾಕ್ಷಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ಕಾಲಾವಕಾಶ ಕೋರಿದ್ದು, ರೂ.200/- ಖರ್ಚಿನೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ